## <u>ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.</u>

## <u>ಸಿ.ಸಿ. ಸಂಖ್ಯೆ: 67/2019</u>

**ಸಾಕ್ಷಿಯನ್ನು ದಿಃ 26.09.2024 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | | |
|---|---|---|---|
| ಹೆಸರು | ಎಂ ಕೆ ತಮ್ಮೇಗೌಡ | ಸಿಡಬ್ಲ್ಯೂ:12 | ಪಿಡಬ್ಲ್ಯೂ:8 |
| ತಂದೆಯ ಹೆಸರು | ಲೇಟ್ ಸಣ್ಣಕರೀಗೌಡ | | |
| ವಯಸ್ಸು | 60 ವರ್ಷ | | |
| ಉದ್ಯೋಗ | ನಿವೃತ್ತ ಪಿ ಎಸ್ ಐ | | |
| ವಾಸಸ್ಥಳ | ಹುಣಸೂರು ಪಟ್ಟಣ | | |

**<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>**

ನಾನು 2016 ರಿಂದ 2022 ರವರೆಗೆ ಹುಣಸೂರು ಪಟ್ಟಣ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 31.05.2018 ರಂದು ಸಂಜೆ 4 ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ 1 ರವರು ನನ್ನ ಮುಂದೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಅದರ ಆಧಾರದ ಮೇಲೆ ಠಾಣೆ ಮೊಕದ್ದಮೆ ಸಂಖ್ಯೆ 296/2018 ರಲ್ಲಿ ಪ್ರಕರಣ ದಾಖಲಿಸಿ ಪ್ರ ವ ವರದಿಯನ್ನು ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ. ನಾನು ಸ್ವೀಕರಿಸಿದ ದೂರು ನಿಪಿ 1 ರಲ್ಲಿ ಇದ್ದು ಸಾಕ್ಷಿಯ ಸಹಿಯನ್ನು ನಿಪಿ 1(ಬಿ) ಎಂದು ನಾನು ಸಲ್ಲಿಸಿದ ಪ್ರ ವ ವರದಿಯನ್ನು ಈಗ ನೋಡುತ್ತಿದ್ದು ನಿಪಿ 7 ಎಂದು ಸಾಕ್ಷಿ ಸಹಿಯನ್ನು ನಿಪಿ 7(ಎ) ಎಂದು ಗುರುತಿಸಲಾಯಿತು. ದೂರು ನೀಡುವ ಸಮಯದಲ್ಲಿ ಚಾಸಾ 1 ರವರು ಒಂದು ಡಿವಿಡಿಯನ್ನು ಹಾಜರುಪಡಿಸಿದ್ದಾರೆ. ಅದನ್ನು ಈಗಾಗಲೇ ಮು.ಮ. 1 ಎಂದು ಗುರುತಿಸಲಾಗಿದೆ. ಸದರಿ ಡಿವಿಡಿಯನ್ನು ಚಾಸಾ 2 ಮತ್ತು 3 ರವರ ಸಮಕ್ಷಮ ಸಂಜೆ 4.30 ರಿಂದ 4.45

ರವರೆಗೆ ಮಹಜರು ಕ್ರಮ ಜರುಗಿಸಿ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಸದರಿ ಮಹಜರನ್ನು ಈಗಾಗಲೇ ನಿಪಿ 3 ಎಂದು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 3(ಡಿ) ಎಂದು ಗುರುತಿಸಲಾಯಿತು. ಸದರಿ ಡಿವಿಡಿಯನ್ನು ಮಾಲು ಪಟ್ಟಿಯಲ್ಲಿ ನಮೂದಿಸಿ ನ್ಯಾಯಾಲಯದ ಆದೇಶಕ್ಕಾಗಿ ನಿವೇದಿಸಿಕೊಂಡಿರುತ್ತೇನೆ. ಸದರಿ ಡಿವಿಡಿಯನ್ನು ಠಾಣೆಯ ಗಣಕಯಂತ್ರಕ್ಕೆ ಹಾಕಿ ಪರಿಶೀಲಿಸಿದಾಗ ಕಳ್ಳನು ಅಂಗಡಿಯ ಒಳಕ್ಕೆ ಹೋಗಿ ಮುಖ ಕಾಣದಂತೆ ಜರ್ಕಿನ್ ಅನ್ನು ತಲೆಯ ಮೇಲೆ ಮುಚ್ಚಿಕೊಂಡು ನಂತರ ಕ್ಯಾಮರಾ ತಿರುಗಿಸಲು ಹೋದಾಗ ಆತನ ಬಲ ಗೈ ಹಸ್ತದ ಹೆಬ್ಬೆರಳಿನ ಹತ್ತಿರ ರನ್ ಎಂದು ಅಚ್ಚೆ ಹಾಕಿಸಿಕೊಂಡಿರುವುದು ಕಂಡು ಬಂತು. ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾಸಾ 1 ರವರು ಹಾಜರಿದ್ದು ಸ್ಥಳ ತೋರಿಸಿದ ಮೇರೆಗೆ ಪಂಚರಾದ ಚಾಸಾ 2 ಮತ್ತು 3 ರವರ ಸಮಕ್ಷಮ ಸಂಜೆ 5 ರಿಂದ 6 ಗಂಟೆಯವರೆಗೆ ನಿಪಿ 2 ರ ಮಹಜರನ್ನು ಜರುಗಿಸಿರುತ್ತೇನೆ. ನಿಪಿ 2 ರಲ್ಲಿ ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 2(ಡಿ) ಎಂದು ಗುರುತಿಸಲಾಯಿತು.

ನಂತರ ಈ ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಚಾಸಾ 13 ರವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟೀಸವಾಲು ಃ 1 ನೇ ಆರೋಪಿ ಪರ ಶ್ರೀ ಎಂ ಇ ಎಂ ವಕೀಲರಿಂದ ಃ**

ಚಾಸಾ 1 ರವರು ಒಂದು ದಿನ ತಡವಾಗಿ ದೂರನ್ನು ನೀಡಿದ್ದಾರೆ. ಕಳ್ಳತನವಾಗಿದ ಎನ್ನುವ ಸ್ಥಳ ವೈನ್ ಶಾಪ್ ಎಂದರೆ ಸರಿ. ದೂರು ಸ್ವೀಕರಿಸುವ ಸಮಯದಲ್ಲಿ ವೈನ್ ಶಾಪ್ ಗೆ ಸಂಬಂಧಿಸಿದ ದಾಖಲೆಯನ್ನು ಪಡೆದುಕೊಂಡಿಲ್ಲ. ಸ್ಥಳದಿಂದ ಬೀಗ ವಶಪಡಿಸಿಕೊಂಡಿದ್ದೀರಾ ಎಂದರೆ ಬೀಗ ಇರಲಿಲ್ಲ. ಸ್ಥಳದ ಭಾವಚಿತ್ರವನ್ನು ತೆಗೆಸಿದ್ದೀರಾ ಎಂದರೆ ಇಲ್ಲ ಮಹಜರಿನಲ್ಲಿ ಬರೆದಿದ್ದೇನೆ. ರೂ 500 ರಿಂದ ರೂ 800 ಚಿಲ್ಲರೆ ಹಣ ಇತ್ತು ಎಂದು ತೋರಿಸುವ ಬಗ್ಗೆ ಚಾಸಾ 1 ರವರು ನನ್ನ ಮುಂದೆ ಯಾವುದೇ ದಾಖಲೆ ಕೊಟ್ಟಿಲ್ಲ. ಈ ಪ್ರಕರಣದಲ್ಲಿ ದೂರನ್ನು ರೂ 500 ರಿಂದ ರೂ 800 ಕಳ್ಳತನ ಆಗಿದೆ ಎಂಬ ಬಗ್ಗೆ

ನೀಡಲಾಗಿದೆ. ಮು ಮ 1 ರಲ್ಲಿ ಯಾವುದೇ ಮಾಹಿತಿ ಇಲ್ಲ ಮತ್ತು ಚಿತ್ರಣ ಇಲ್ಲ ಎಂದರೆ ಸರಿಯಲ್ಲ. ಚಾಸಾ 2 ಮತ್ತು 3 ರವರಿಗೆ ನೋಟೀಸು ಕೊಟ್ಟಿಲ್ಲ. ಚಾಸಾ 2 ಮತ್ತು 3 ನಮ್ಮ ಠಾಣೆಯ ಖಾಯಂ ಮಹಜರು ಸಾಕ್ಷಿದಾರರು ಎಂದರೆ ಸರಿಯಲ್ಲ. ನಾನು ಆ ದಿನ ಯಾವುದೇ ಅಮಾನತ್ತು ಮಹಜರು ಮಾಡಿಲ್ಲ ಎಂದರೆ ಸರಿಯಲ್ಲ.

ಸ್ಥಳ ಪಂಚನಾಮೆಗೆ ಬರುವಂತೆ ಚಾಸಾ 2 ಮತುತ 3 ರವರಿಗೆ ನೋಟೀಸು ಕೊಟ್ಟಿಲ್ಲ. ಆ ದಿನ ಬಾರ್ ನಲ್ಲಿ ರೂ 500 ರಿಂದ ರೂ 800 ಹಣ ಇರಲಿಲ್ಲ ಮತ್ತು ಯಾವುದೇ ಕಳ್ಳತನ ಆಗಿರಲಿಲ್ಲ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಸರಣಿ ಕಳ್ಳತನಕ್ಕೆ ಸಂಬಂಧಪಟ್ಟಂತೆ ನಿಪಿ 1 ರ ಸುಳ್ಳು ದೂರನ್ನು ಸ್ವೀಕರಿಸಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲು ಃ 2 ನೇ ಆರೋಪಿ ಪರ ಶ್ರೀ ಎಸ್ ಎನ್ ವಕೀಲರಿಂದ ಃ**

2 ನೇ ಆರೋಪಿ ಹಾಜರಿದ್ದು ಆತನ ವಕೀಲರು ಗೈರು ಹಾಜರಿದ್ದು ಆತನ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.